ಮೈಸೂರು ವಿಶ್ವವಿದ್ಯಾಲಯದ ಅಂಚೆ ಮಂತ್ರ್ಯ ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಪರಿಶಿಷ್ಟ ವರ್ಗದವರಿಗೆ ಪರೀಕ್ಷಾ ಶುಲ್ಕವನ್ನು ವಿಧಿಸಿರುವುದು

೧೬೫. ಶ್ರೀ ಹೆಚ್. ಪಿ. ಮಹಾದೇವಯ್ಯ (ಟಿ. ನರಸೀಪುರ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ ಮತ್ತು ಪರೀಕ್ಷಾ ಶುಲ್ಕ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಮೊದಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ವಿಶ್ವವಿದ್ಯಾನಿಲಯದವರು ಯಾವುದೇ ಶುಲ್ಕವನ್ನು ವಿಧಿಸದಿರುವುದು ನಿಜವಲ್ಲವೇ, ಹಾಗಿದ್ದಲ್ಲಿ, ಯಾವ ವರ್ಷದಿಂದ ಶುಲ್ಕ ವಿಧಿಸಲಾಗಿದೆ, ಹಾಗೂ ಯಾವ ಯಾವ ತರಗತಿಗಳಿಗೆ ಎಷ್ಟೆಷ್ಟು ವಿಧಿಸಲಾಗಿದೆ ?

ಇ) ಶುಲ್ಕವನ್ನು ವಿಧಿಸಿರುವುದರಿಂದ ಅನೇಕ ವಿದ್ಯಾರ್ಥಿಗಳು ಶುಲ್ಕ ಕಟ್ಟಲಾಗದೆ ವಿದ್ಯಾಭ್ಯಾಸವನ್ನು ಬಿಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಶುಲ್ಕವನ್ನು ರದ್ದುಮಾಡಿ ವಿದ್ಯಾಭ್ಯಾಸ ಮಾಡಲು ಅನುವು ಮಾಡಿಕೊಡ ಲಾಗುವುದೇ ?

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು),—

ಅ) ಹೌದು.

ಆ) ಹೌದು. ೧೯೮೧-೮೨ ರಿಂದ ಶುಲ್ಕ ವಿಧಿಸಲಾಗುತ್ತಿದೆ.

ಬಿ. ಎ., ಬಿ.ಕಾಂ.,	ಪ್ರತಿವರ್ಷ	ರೂ. ೩೫೦
ಎಂ. ಎ.	ಅದೇ	ರೂ. ೬೦೦
ಡಿಪ್ಲೊಮೊ	ಅದೇ	ರೂ. ೩೦೦
ಕನ್ನಡೇತರರಿಗಾಗಿ ಸರ್ಟಿಫಿಕೇಟ್ ಕೋರ್ಸ್		ರೂ. ೨೦೦

ಇ) ಇಲ್ಲ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಎ. ಪಿ. ಪ್ರೌಢಶಾಲೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರಿಗೆ ವೇತನ

೧೬೬. ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎ. ಪಿ. ಪ್ರೌಢಶಾಲೆಯಲ್ಲಿ ಖಾಲಿ ಇರುವ ಅನುಮೋದಿತ ಸಿಬ್ಬಂದಿ ವರ್ಗದವರಿಗೆ ಕಳೆದ ಒಂದು ವರ್ಷದಿಂದ ವೇತನ ಬಿಡುಗಡೆ ಮಾಡದಿರಲು ಕಾರಣವೇನು ?

ಆ) ಇದರ ಬಗ್ಗೆ ವೇತನ ಬಿಡುಗಡೆ ಮಾಡಲು ಸರ್ಕಾರದ ಸ್ಪಷ್ಟ ಆದೇಶ ಸಂಬಂಧಪಟ್ಟ ಅಧಿಕಾರಿಗಳಿಗೆ ಹೋಗಿದ್ದರೂ ಇದುವರೆವಿಗೂ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ?

ಇ) ೧೯೮೭ರ ಮಾರ್ಚ್‌ನಲ್ಲಿ ವೇತನ ಬಿಡುಗಡೆ ಮಾಡುವಾಗ ಸಂಬಂಧಪಟ್ಟ ಅಧಿಕಾರಿಗಳು ನಿಯಮಗಳನ್ನು ಸರಿಯಾಗಿ ಪಾಲಿಸಿದ್ದಾರೆಯೇ ?

ಈ) ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ ಸಹ ಅನುಮೋದಿತ ಸಿಬ್ಬಂದಿವರ್ಗದವರಿಗೆ ವೇತನ ತಡೆ ಹಿಡಿಯುವಾರದೆಂಬ ನಿಯಮ ಪಾಲಿಸದಿರಲು ಕಾರಣವೇನು ?

ಉ) ಸರ್ಕಾರದ ಆದೇಶ ಪಾಲಿಸುವಲ್ಲಿ ನಿರ್ಲಕ್ಷ ತೋರಿಸಿರುವುದರ ಬಗ್ಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮವೇನು ?